ಅರುಣನ ಹೆಂಡ್ತಿ ಸಂಪ್ರದಾಯಸ್ಥೆ. ಅಪ್ಪ ಮಗನ ಸಂಬಂಧ ಹೇಗಿತ್ತೋ ನನಗೆ ಗೊತ್ತಿಲ್ಲ. ಅರುಣನ ಹೊಸಮನೆಯ ಗೃಹಪ್ರವೇಶಕ್ಕೂ ಬಲರಾಮ್ ಸರ್ ಹೋಗಿರಲಿಲ್ಲ. ತಮಗೆ ಯಾರೂ ಇಲ್ಲ ಅನ್ನೋ ರೀತಿ ಬದುಕಿದ್ದರು' ಅಂದು ಸುಮ್ಮನಾದ.

ಅನುಮಾನ ಬರುವಂತಹದ್ದೇನೂ ಇನ್‌ಸ್ಪೆಕ್ಟರ್ ಕಣ್ಣಿಗೆ ಬೀಳಲಿಲ್ಲ. ನಿದ್ದೆಯಲ್ಲಿದ್ದಾಗ ಬಲರಾಮ್ ಅವರಿಗೆ ಹಾರ್ಟ್‌ಅಟ್ಯಾಕ್ ಆಗಿರಬಹುದು. ಹಾಸಿಗೆಯಲ್ಲೇ ಹೊರಳಾಡಿದ ಲಕ್ಷಣಗಳಿವೆ. ಮ್ಯಾಸೀವ್ ಅಟ್ಯಾಕ್ ಆಗಿರಬಹುದು ಅಂತ ಮನಸ್ಸಿನಲ್ಲೇ ಅಂದುಕೊಳ್ಳುತ್ತ ಗಣಪತಿ ಕಡೆ ನೋಡಿದರು. 'ಮೂಗಲ್ಲಿ ಬ್ಲೀಡಿಂಗ್ ಆಗಿರೋದರಿಂದ ಅನುಮಾನ ಬರ್ತಿದೆ. ಮಿಸ್ಟೀರಿಯಸ್ ಡೆತ್ ಅಂತ ನಿಮಗೆ ಅನ್ನಿಸ್ತಿಲ್ವ. ಬಾಡೀನ ಪೋಸ್ಟ್‌ಮಾರ್ಟಂಗೆ ಕಳಿಸಬೇಕು. ಪಿಎಂ ಮಾಡಿಸಿದರೆ ಕಾರಣ ಗೊತ್ತಾಗುತ್ತೆ. ಅವರ ಮಗನಿಗೆ ಇನ್ನೊಂದ್ ಸಲ ಫೋನ್ ಮಾಡ್ರಿ. ಅವರು ಬರೋವರೆಗೂ ಬಾಡಿ ಎತ್ತೋದು ಬೇಡ ಅಂತ ಕಾಯ್ತಾ ಇದ್ದೀನಿ. ಬರ್ತಾರೊ ಇಲ್ಲವೋ ಕೇಳಿ' ಅಂದರು. ಫೋನ್ ಮಾಡಿ ಬರ್ತೀನಿ ಅನ್ನುತ್ತ ಗಣಪತಿ ಮನೆಯಿಂದ ಹೊರಕ್ಕೆ ಹೋದ.

'ಅರುಣ, ಕೆ.ಬಿ. ಹಿಲ್ಸ್ ಸ್ಟೇಷನ್ನಿನ ಇನ್‌ಸ್ಪೆಕ್ಟರ್ ಬಂದಿದ್ದಾರೆ, ಬೇಗ ಬಾರಾಯ. ನೋಡೋಕೆ ಕಿರಿಕ್ ಪಾರ್ಟಿ ಥರ ಕಾಣ್ತಾರೆ. ಮೂಗಲ್ಲಿ ಬ್ಲೀಡಿಂಗ್ ಆಗಿದೆ, ಬಾಡೀನ ಪಿಎಂಗೆ ಕಳಿಸಬೇಕು ಅನ್ತಿದ್ದಾರೆ. ಒಂದೇ ಊರಲ್ಲಿದ್ದರೂ ಅಪ್ಪ, ಮಗ ಬೇರೆ ಬೇರೆ ಇದ್ದರಲ್ಲ ಯಾಕೆ ಅಂತ ನನ್ನ ಕೇಳಿದರು. ನಂಗೇನೂ ಗೊತ್ತಿಲ್ಲ ಅಂತ ಹೇಳಿದ್ದೀನಿ. ನಿಂಗೂ ಇಂಥವೇ ಪ್ರಶ್ನೆ ಕೇಳಬಹುದು. ರೆಡಿಯಾಗಿರು' ಅಂತ ಎಚ್ಚರಿಸಿ, 'ಸರಿ, ನೀನು ಎಲ್ಲಿದ್ದೀಯಾ?' ಅಂದ. 'ಇನ್ನೈದು ನಿಮಿಷದಲ್ಲಿ ಅಲ್ಲಿರ್ತೀನಿ' ಅನ್ನುತ್ತ ಅರುಣ ಫೋನ್ ಕಟ್ ಮಾಡಿದ. ಗಣಪತಿ ಮನೆಯೊಳಕ್ಕೆ ಬರುತ್ತ, 'ಇಲ್ಲೇ ಹತ್ತಿರದಲ್ಲೇ ಬರ್ತಾ ಇದ್ದಾರಂತೆ. ಮೂರ್ನಾಲ್ಕು ನಿಮಿಷಗಳಲ್ಲಿ ಬರಬಹುದು' ಅನ್ನುತ್ತ ಇನ್‌ಸ್ಪೆಕ್ಟರ್ ಕಡೆ ನೋಡಿದ. 'ಬಾಡಿ ನೋಡೋಕೆ ತುಂಬಾ ಜನ ಬರ್ತಾರೆ ಅನ್ಸುತ್ತೆ, ವ್ಯವಸ್ಥೆ ಮಾಡಿಕೊಳ್ಳಿ' ಅಂತ ಇನ್‌ಸ್ಪೆಕ್ಟರ್ ಹೇಳುತ್ತಿರುವಾಗ ಅರುಣ ಬಂದ್ರು ಅಂತ ಯಾರೋ ಬಂದು ಹೇಳಿದರು.

ಮೆಲ್ಲನೆ ಮನೆಯೊಳಕ್ಕೆ ಬಂದ ಅರುಣ ನೇರವಾಗಿ ಕಾಟಿನ ಬಳಿ ಹೋಗಿ ನಿಂತು ಮೂರ್ನಾಲ್ಕು ನಿಮಿಷ ಅಪ್ಪನ ಮುಖ ದಿಟ್ಟಿಸಿದ. ಎಲ್ಲಾ ಮುಗಿಯಿತಲ್ಲ ಅನ್ನೋ ನಿರಾಳ ಭಾವ ಅವನಲ್ಲಿತ್ತು. ಸ್ವಲ್ಪ ಹೊತ್ತು ಹಾಗೇ ನಿಂತಿದ್ದ. ಆಮೇಲೆ ಸುತ್ತ ನೋಡಿ ಅಲ್ಲೇ ಇದ್ದ ಕುರ್ಚಿಯಲ್ಲಿ ಕೂತ. ಅಪ್ಪ ಸತ್ತದ್ದಕ್ಕೆ ಮಗನ ಕಣ್ಣಲ್ಲಿ ಒಂದು ಹನಿ ನೀರೂ ಇಲ್ಲವಲ್ಲ ಅನ್ನಿಸಿತು ಇನ್‌ಸ್ಪೆಕ್ಟರ್‌ಗೆ. 'ನೋಡಿ, ಮಿಸ್ಟರ್, ಬಾಡೀನ ಪಿಎಂಗೆ ಕಳಿಸಬೇಕು. ನೀವು ಬರಲಿ ಅಂತ ಕಾಯ್ತಾ ಇದ್ದೆ' ಅಂದರು.

★★★

ಹತ್ತುಹದಿನೈದು ನಿಮಿಷ ಕಳೆಯುವಷ್ಟರಲ್ಲಿ ಖ್ಯಾತ ಸಾಹಿತಿ, ಪ್ರಾಧ್ಯಾಪಕ, ಪ್ರಖರ ವಿಚಾರವಾದಿ ಪ್ರೊ. ಬಲರಾಮ್ ನಿಧನ ಅನ್ನೋ ಒಂದು ಸಾಲಿನ ಸುದ್ದಿ ಟೀವಿಯೊಂದರಲ್ಲಿ ಕಾಣಿಸಿತು. ಸ್ವಲ್ಪ ಹೊತ್ತಿನ ನಂತರ ಇನ್ನೊಂದು ಚಾನಲ್‌ನಲ್ಲಿ ಬಲರಾಮ್ ನಿಗೂಢ ಸಾವು ಅಂತ ಪ್ರಶ್ನಾರ್ಥಕ ಚಿನ್ಹೆ ಹಾಕಿ ಸುದ್ದಿ ಮಾಡಿತು. ಬಲರಾಮ್ ಅವರನ್ನು ಜನ ಮರೆತಿದ್ದರು. ನಿವೃತ್ತಿಯ ನಂತರ ಅಮೆರಿಕಕ್ಕೆ ಹೋದರು ಅಂತ ಸುದ್ದಿಯಾಗಿತ್ತಲ್ಲ. ಇಷ್ಟು ದಿನ ಎಲ್ಲಿದ್ದರು? ಇದೇ ಊರಲ್ಲಿದ್ದರೂ ನಮಗೆ ಗೊತ್ತೇ ಆಗಲಿಲ್ಲವಲ್ಲ ಅಂತ ಅನೇಕರು ಪೇಚಾಡಿಕೊಂಡರು. ಯಾರಿಗೂ ಸುಳಿವು ಕೊಡದೆ ಬದುಕಿಗೆ ವಿದಾಯ ಹೇಳಿದರು ಅನ್ನೋ ಮಾತುಗಳು ಕೇಳಿ ಬಂದವು. ಅಜ್ಞಾತವಾಗಿಯೇ ಬದುಕಿದ್ದ ಮೆಚ್ಚಿನ ಲೇಖಕನ ಸಾವಿನ ಸುದ್ದಿಯನ್ನು ಅವರ ಅಭಿಮಾನಿಗಳಿಗೆ ಅರಗಿಸಿಕೊಳ್ಳಲು ಆಗಲಿಲ್ಲ. ಅನೇಕರು ಹೆಚ್ಚಿನ ಮಾಹಿತಿಗಾಗಿ ಮೀಡಿಯಾ ಕಚೇರಿಗಳಿಗೆ ಫೋನ್ ಮಾಡಿದರು.

ಬಲರಾಮ್ ಸರ್ ಮನೆ ಎಲ್ಲಿದೆ? ಅಂತ್ಯಕ್ರಿಯೆ ಯಾವಾಗಂತೆ? ಸಾಯುವಾಗ ಹತ್ತಿರದಲ್ಲಿ